# ನಾಗರಾಳ ಮನೆತನದ ಕೃಷಿ ತಾತ್ವಿಕತೆ, ಪ್ರಾಯೋಗಿಕತೆಯ ಅನುಸಂಧಾನ

**ರವಿ ಹಾದಿಮನಿ***

**DOI: https://doi.org/10.5281/zenodo.21438324**

**ABSTRACT**

ನಾಗರಾಳ ಮನೆತನವು ಶ್ರೀ ಘನಮಠ ಶಿವಯೋಗಿಗಳ 'ಕೃಷಿಜ್ಞಾನ ಪ್ರದೀಪಿಕೆ'ಯ ತಾತ್ವಿಕ ಬೋಧನೆಗಳನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಂಡು, ಸತತ ಮೂರು ತಲೆಮಾರುಗಳಿಂದ ಒಣಬೇಸಾಯದಲ್ಲಿ ಕ್ರಾಂತಿಕಾರಕ ಸಾಧನೆಗೈದಿದೆ. ಸಂಗನಬಸಪ್ಪನವರು ಹಸ್ತಪ್ರತಿಯಾಗಿ ತಂದ ಈ ಅಮೂಲ್ಯ ಜ್ಞಾನವು, ಬರದ ವಿರುದ್ಧ ಸಮರ ಸಾರುವ 'ಗುಂಡಾವರ್ತಿ'ಯಂತಹ ದೇಶೀ ಜಲ-ಮಣ್ಣು ಸಂರಕ್ಷಣಾ ತಂತ್ರಗಳ ಮೂಲಕ ಇಡೀ ರೈತ ಸಮುದಾಯಕ್ಕೆ ದಾರಿದೀಪವಾಗಿದೆ. ಎರಡನೇ ತಲೆಮಾರಿನ ಶಂಕರಣ್ಣ ನಾಗರಾಳರು ಕೃಷಿ ವಚನಗಳ ರಚನೆಯ ಮೂಲಕ ಅನಕ್ಷರಸ್ಥ ರೈತರಲ್ಲಿ ಬೌದ್ಧಿಕ ಜಾಗೃತಿ ಮೂಡಿಸಿದರೆ, ಡಾ. ಮಲ್ಲಣ್ಣ ನಾಗರಾಳರು ಆಧುನಿಕ ವಿಜ್ಞಾನ, ಪರಿಸರ ಕಾಳಜಿ ಹಾಗೂ ಜಲಸಾಕ್ಷರತೆಯೊಂದಿಗೆ ಈ ಪರಂಪರೆಗೆ ಸಾಂಸ್ಥಿಕ ಮಾನ್ಯತೆ ತಂದುಕೊಟ್ಟರು. ಕೃಷಿಯನ್ನು ಕೇವಲ ಆರ್ಥಿಕ ಲಾಭದ ವೃತ್ತಿಯಾಗಿ ನೋಡದೆ, ಶರಣರ ಕಾಯಕ ಮತ್ತು ದಾಸೋಹ ತತ್ವದಂತೆ ಮುನ್ನಡೆಸಿದ ಈ ಯಶೋಗಾಥೆಯು ಸ್ವಾವಲಂಬನೆ ಮತ್ತು ಸಮರ್ಥ ಬರ ನಿರ್ವಹಣೆಯ ನೈಜ ದ್ಯೋತಕವಾಗಿದೆ. ಕೃಷಿ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಇಂದಿನ ದಿನಮಾನಗಳಿಗೆ ಈ ಮಣ್ಣಿನ ಪರಂಪರೆ ಅತ್ಯಂತ ಪ್ರಸ್ತುತವಾಗಿದೆ.

**KEYWORDS:** ನಾಗರಾಳ ಮನೆತನ, ಕೃಷಿಜ್ಞಾನ ಪ್ರದೀಪಿಕೆ, ಒಣಬೇಸಾಯ ಪದ್ಧತಿ, ಜಲ ಸಾಕ್ಷರತೆ, ಕೃಷಿ ವಚನಗಳು.

* **ರವಿ ಹಾದಿಮನಿ,** ಸಂಶೋಧನಾ ವಿದ್ಯಾರ್ಥಿ, ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ, ಜಗದ್ಗುರು ತೋಂಟದಾರ್ಯ ಮಠ, ಗದಗ.

**ಪ್ರಸ್ತಾವನೆ:**

ಮಠದೊಳಗಿನ ಬಹುಸಂಖ್ಯಾತ ಸ್ವಾಮಿಜಿಗಳು ವೇದಾಂತ, ಧಾರ್ಮಿಕ ಆಚಾರ-ವಿಚಾರಗಳನ್ನು ಮಾತ್ರ ಬೋಧಿಸುವುದನ್ನು ಕಾಣುತ್ತೇವೆ. ಕಪ್ಪತಗುಡ್ಡದ ಶಿವಕುಮಾರ ಸ್ವಾಮಿಜಿ, ಕನ್ನೇರಿಯ ಕಾಡಸಿದ್ದೇಶ್ವರ ಸ್ವಾಮಿಜಿ ಇನ್ನು ಮುಂತಾದವರು ಇದಕ್ಕೆ ಅಪವಾದವೆಂಬಂತಿದ್ದಾರೆ. 'ಕಾಯಕವೇ ಕೈಲಾಸ' ಎಂಬ ಶರಣತತ್ವವನ್ನು ನಂಬಿರುವ ಈ ನೆಲದ ಉಸಿರಾಗಿರುವ ರೈತನ ಬದುಕಿಗೆ ಬೆಳಕಾಗುವ ಕೃಷಿವಿಜ್ಞಾನದ ತತ್ವಗಳನ್ನು ನೀಡಿದ ಘನಮಠ ಶಿವಯೋಗಿಗಳ ಕಾರ್ಯ ದಿಕ್ಸೂಚಿಯ ರೂಪವಾಗಿದೆ. ಕೃಷಿಜ್ಞಾನ ಪ್ರದೀಪಿಕೆಯು ಕರ್ನಾಟಕ ಕೃಷಿಸಾಹಿತ್ಯ ಗ್ರಂಥಗಳಲ್ಲಿಯೇ ವಿಶೇಷವಾದ ಮೈಲುಗಲ್ಲಾಗಿದೆ. ಇದು ಕೃಷಿಯ ಬಗ್ಗೆ ಕೇವಲ ತಾತ್ವಿಕ ಬೋಧನೆಗಳನ್ನು ಒಳಗೊಂಡಿಲ್ಲ. ಇದು ಪ್ರಾಯೋಗಿಕ ಕೃಷಿತತ್ವಗಳ ಕೈಪಿಡಿಯಾಗಿದೆ. ಈ ಒಂದು ಗ್ರಂಥವು ನಾಗರಾಳ ಮನೆತನದ ಮಹಾಬೆಳಕಾಗಿದ್ದು ಚಾರಿತ್ರಿಕ ದಾಖಲೆಯಾಗಿದೆ. ಪುಸ್ತಕಗಳ ಓದು ಕೇವಲ ಆಹ್ಲಾದನೆಯಲ್ಲ, ಬದುಕಿನ ಸಂಕಷ್ಟಗಳನ್ನು ಪರಿಹಾರ ಮಾಡಬಲ್ಲ ದಿವ್ಯಾಸ್ತ್ರಗಳು ಎಂಬುದಕ್ಕೆ ಇದೊಂದು ನೈಜ ನಿದರ್ಶನ. ಘನಮಠ ಶಿವಯೋಗಿಗಳು ಬೋಧಿಸಿದ ಕೃಷಿತತ್ವಗಳನ್ನು ತಮ್ಮ ಹೊಲಗಳಲ್ಲಿ ಅಳವಡಿಸಿಕೊಂಡು ಹೊನ್ನಿನ ಬೆಳೆ ಪಡೆಯುವ ಕ್ರಿಯೆಯು ಒಣಬೇಸಾಯ ಅವಲಂಬಿಸಿರುವ ಕೃಷಿಕರಿಗೆ ಪ್ರೇರಣಾದಾಯಕವಾಗಿದೆ. ಈ ಕೃಷಿಯು ನಾಗರಾಳ ಮನೆತನದವರಿಗೆ ಲಭಿಸಿದ್ದು ಹೇಗೆ? ಅದರಲ್ಲಿರುವ ಸಾರವನ್ನು ಹೇಗೆ ಭೂಮಿಯಲ್ಲಿ ಅನ್ವಯಿಸಿಕೊಳ್ಳಲಾಯಿತು? ಆಧುನಿಕ ಕೃಷಿತಜ್ಞರನ್ನು ಬೆರಗುಗೊಳಿಸಿದ ಇವರ ದೇಶೀ ಕೃಷಿತಂತ್ರಗಳು ಯಾವವು? ಇತ್ಯಾದಿ ವಿಚಾರಗಳನ್ನು ಅರಿತುಕೊಳ್ಳೋಣ.

**ಸಂಗನಬಸಪ್ಪನವರ ಕೃಷಿಜ್ಞಾನ ಶೋಧನೆ:**

ನಾಗರಾಳ ಮನೆತನದ ಹಿರಿಯರಾದ ಸಂಗನಬಸಪ್ಪ ರಾಯಪ್ಪ ನಾಗರಾಳ ಅವರು ಪ್ರಸ್ತುತ ಇಳಕಲ್ಲ ತಾಲ್ಲೂಕಿನ ಇಂಗಳಗಿ ಗ್ರಾಮದ ತಿಮ್ಮನಗೌಡರ ಮನೆಯ ಜಗುಲಿಯ ಮೇಲಿಟ್ಟು ಪೂಜಿಸುತ್ತಿದ್ದ ಶ್ರೀ ಘನಮಠ ಶಿವಯೋಗಿಗಳ ವಿರಚಿತ 'ಕೃಷಿಜ್ಞಾನ ಪ್ರದೀಪಿಕೆ' ಕೃತಿಯನ್ನು ಕಂಡು ಅವರಲ್ಲಿ ಇದನ್ನು ಅಧ್ಯಯನ ಮಾಡಿಕೊಂಡು ಪುನಃ ನಿಮಗೆ ಹಿಂತಿರುಗಿಸುತ್ತೇನೆಂದು ವಿನಂತಿಸಿಕೊಂಡಾಗ ಅದಕ್ಕೆ ಅವರು ಒಪ್ಪಲಿಲ್ಲ. ಕೊನೆಗೆ ತಿಮ್ಮನಗೌಡರು 'ಈ ಕೃತಿಯನ್ನು ನಮ್ಮ ಮನೆಯಲ್ಲಿಯೇ ಕುಳಿತು ಬರೆದುಕೊಂಡು ಹೋಗಬಹುದು' ಎಂಬ ಷರತ್ತು ಹಾಕಿದರು. ಇದನ್ನು ಒಪ್ಪಿಕೊಂಡ ಸಂಗನಬಸಪ್ಪನವರು ಬೆಳಗಿನ ಜಾವ ಸ್ನಾನಾದಿ ಕ್ರಿಯೆಗಳನ್ನು ಪೂರೈಸಿಕೊಂಡು ಹುನಗುಂದದಿಂದ 13 ಕಿ.ಮೀ ಅಂತರದಲ್ಲಿದ್ದ ಇಂಗಳಗಿ ಗ್ರಾಮಕ್ಕೆ ತಿಂಗಳುಗಟ್ಟಲೆ ಕಾಲ್ನಡಿಗೆಯಲ್ಲಿ ಪ್ರಯಾಣಿಸಿ ಕೃತಿಯನ್ನು ಹಸ್ತಪ್ರತಿ ಮಾಡಿಕೊಂಡರು. ಇದು ನಾಗರಾಳ ಮನೆತನಕ್ಕೆ ಒಂದು ಐತಿಹಾಸಿಕ ಘಟನೆಯಾಗಿ ಮಾರ್ಪಟ್ಟಿತು. ಪ್ರತಿ ಮಾಡಿಕೊಂಡು ಬಂದ ಸಂಗನಬಸಪ್ಪನವರು ಆರೇಳು ಸಲ ಅಧ್ಯಯನ ಮಾಡಿ ಅದರಲ್ಲಿರುವ ಸಾರವನ್ನು ಸಂಪೂರ್ಣವಾಗಿ ಅರಿತುಕೊಂಡು ತಮ್ಮ ಹೊಲದಲ್ಲಿ ಪ್ರಾತ್ಯಕ್ಷಿಕೆಯಾಗಿ ಅನ್ವಯಿಸಿಕೊಂಡರು. 1913 ರಲ್ಲಿಯೇ 'ಗುಂಡಾವರ್ತಿ'ಯನ್ನು ನಿರ್ಮಿಸಿದ್ದರಿಂದ 'ಪೂಲ್ ಸಂಗಪ್ಪ' ಎಂದು, ದುಂಡಾದ ಅಕ್ಷರಗಳನ್ನು ಬರೆಯುತ್ತಿದ್ದರಿಂದ ಅವರ ಗುರುಗಳಾದ ಅಮೀನಸಾಬರಿಂದ 'ಪ್ರಿಂಟಿಂಗ್ ಪ್ರೆಸ್' ಎಂದು ಕರೆಸಿಕೊಂಡಿದ್ದರು. ಇವರ ಹಸ್ತಪ್ರತಿಯನ್ನು ಗಮನಿಸಿದಾಗ ಸತ್ಯವೆನಿಸುತ್ತದೆ.

ಸಂಗನಬಸಪ್ಪನವರು ಬರೆದುಕೊಂಡು ಬಂದ ಈ ಪುಸ್ತಕವನ್ನು ನಾಗರಾಳ

ಮನೆತನದವರು ಅದರಲ್ಲಿರುವ ಸಾರವನ್ನು ಕಳೆದ ಮೂರು ತಲೆಮಾರುಗಳಿಂದ ಕೃಷಿಯನ್ನು ಅನ್ವಯಿಸಿಕೊಂಡಿದ್ದಾರೆ. ಹೀಗಾಗಿಯೇ ಈ ಮನೆತನಕ್ಕೆ 'ಅರಗಾಲದಲ್ಲಿ ಎಂಟಾಣೆ, ಬರಗಾಲದಲ್ಲಿ ನಾಲ್ಕಾಣೆ' ಎಂಬ ತತ್ವದಂತೆ ಫಸಲು ಪಡೆಯುತ್ತಾರೆ. 2002 ರಿಂದ 2004 ರವರೆಗೆ ಬಿದ್ದ ಬರಗಾಲದ ತೀವ್ರತೆಯಿಂದ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಯ ರೈತರು ಕಂಗಾಲಾಗಿದ್ದರು. "ಆದರೆ ಆಶ್ಚರ್ಯ, ಹುನಗುಂದ ತಾಲ್ಲೂಕಿನ ರೈತರು ಬೆಚ್ಚಲಿಲ್ಲ. ಗುಳೆ ಹೋಗಲಿಲ್ಲ. ಅವರ ಹೊಟ್ಟೆಪಾಡಿಗೆ ಆಗಿ ಮಿಗುವಷ್ಟು ಧಾನ್ಯವನ್ನು ಎಲ್ಲರ ಹೊಲಗಳೂ ಕರುಣಿಸಿದ್ದವು! ಇದು ಎಂಟು-ಹತ್ತು ವರ್ಷಗಳ ಬದಲಾವಣೆಯಲ್ಲ. ಅಲ್ಲಿನ ಯತ್ನಗಳಿಗೆ ಶತಮಾನದ ಚರಿತ್ರೆಯಿದೆ. ಸರಕಾರಿ ಯೋಜನೆಗಳ ಸಬ್ಸಿಡಿಯ ಆಸೆಯ ಕೆಲಸವೂ ಅದಲ್ಲ. ತಾಲ್ಲೂಕಿನ ರೈತಕುಟುಂಬವೊಂದರ ಮೂರು ತಲೆಮಾರುಗಳ ಶತಮಾನದ ತಪಸ್ಸಿನ ಫಲವದು." ಎಂದು ನಾಗರಾಳ ಮನೆತನದವರು ಅನುಸರಿಸುವ ಕೃಷಿತತ್ವಗಳ ಮತ್ತು ಹುನಗುಂದ ತಾಲ್ಲೂಕಿನ ಬಹುತೇಕ ರೈತರು ಸಮರ್ಥವಾಗಿ ಬರವನ್ನು ಎದುರಿಸಿದ ಬಗ್ಗೆ ಪತ್ರಕರ್ತರಾದ ಶ್ರೀಪಡ್ರೆಯವರು 'ಬರವನ್ನೇ ಮಣಿಸಿದ ಮಲ್ಲಣ್ಣ' ಪುಸ್ತಕದಲ್ಲಿ ದಾಖಲಿಸಿದ್ದಾರೆ.

ತಾವು ಕೈಗೊಂಡ ಕೃಷಿತತ್ವಗಳನ್ನು ಕೇವಲ ತಮ್ಮ ಹೊಲಗಳಿಗೆ ಸೀಮಿತವಾಗಬಾರದು; ಇಡೀ ರೈತ ಸಮುದಾಯವನ್ನು ಉಜ್ವಲಗೊಳಿಸಬೇಕೆಂಬುದು ನಾಗರಾಳ ಕುಟುಂಬದವರ ದೃಢವಾದ ಬದ್ಧತೆಯಾಗಿತ್ತು. ಕಳೆದ ಮೂರು ತಲೆಮಾರುಗಳಿಂದ ರೈತರ ಜಮೀನುಗಳನ್ನು ತಿದ್ದುವ, ಮಾರ್ಗದರ್ಶನ ನೀಡುವ ಮಹತ್ವದ ಕಾಯಕದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಈ ಮಹತ್ವದ ಸೇವೆಗೆ ಯಾವುದೇ ಆರ್ಥಿಕ ಲಾಭಕ್ಕಾಗಿ, ಗೌರವಧನದ ಫಲಾಪೇಕ್ಷೆಯನ್ನು ಬಯಸದೇ ಇದೊಂದು ಸೇವೆಯೆಂದು ಭಾವಿಸಿದ್ದರು. 'ತನ್ನಂತೆ ಇತರರ ಹೊಟ್ಟೆ ತುಂಬಬೇಕು' ಎಂಬ ಶರಣರ ದಾಸೋಹತತ್ವವನ್ನು ಹೊಂದಿದ ಸಮಾಜಮುಖಿ ಕಾರ್ಯವಾಗಿತ್ತು. ಪ್ರಸ್ತುತ ದಿನಗಳಲ್ಲಿ ತಮಗೆ ಲಭಿಸಿದ ಜ್ಞಾನವನ್ನೇ ವ್ಯಾಪಾರಕ್ಕಾಗಿ ಪೇಟೆಂಟ್ ಮಾಡಿಕೊಳ್ಳುವ ಈ ಯುಗದಲ್ಲಿ, ದೊರೆತ ಜ್ಞಾನವನ್ನು ಉಚಿತವಾಗಿ ಪ್ರಸಾರಗೈಯುವ ಕಾರ್ಯವು ಶರಣತತ್ವವನ್ನು ಮುಂದುವರೆಸಿದ ಸಂಕೇತವಾಗಿದೆ.

ಬರದ ವಿರುದ್ಧ ಸಮರ ಸಾರುವ ಮಣ್ಣಿನ ತೇವಾಂಶ ಕಾಪಾಡಿಕೊಳ್ಳುವ ಇವರ ದೇಶೀ ಕೃಷಿವಿಜ್ಞಾನದಲ್ಲಿ ಗುಂಡಾವರ್ತಿಯನ್ನು ನಿರ್ಮಿಸಿಕೊಂಡದ್ದು. ಇದರ ಪ್ರಮುಖ ಉದ್ದೇಶವೆಂದರೆ ಮಳೆಯಾದಾಗ ಬೃಹತ್ ಪ್ರಮಾಣದ ನೀರು ಹರಿದು ಬಂದಾಗ ಹೊಲಕ್ಕೆ ಬೇಕಾಗುವಷ್ಟು ನಿಲ್ಲಿಸಿ, ಹೆಚ್ಚುವರಿ ನೀರನ್ನು ಹೊರಬಿಡುವುದಕ್ಕಾಗಿ. ಅಲ್ಲದೇ ಮೇಲ್ಮಣ್ಣು ಕೊಚ್ಚಿಕೊಂಡು ಹೋಗುವುದನ್ನು ತಪ್ಪಿಸುವುದಕ್ಕಾಗಿ. 'ಆನೆತ್ತರ ಬರುವ ನೀರನ್ನು ಗೇಣೆತ್ತರ ನಿಲ್ಲುವಂತೆ, ನಿಂತ ನೀರು ಇಂಗುವಂತೆ' ಮಾಡಿ ಸ್ವೇಚ್ಛಾಚಾರವಾಗಿ ಓಡುವ ನೀರನ್ನು ಲಗಾಮು ಹಾಕುವುದು. ಗುಂಡಾವರ್ತಿಗೆ ಸಣ್ಣ ಮೋರಿ ಬಿಟ್ಟು ಅದರ ಬಾಯಿಗೆ ಒಂದು ಕಲ್ಲನ್ನು ಇಟ್ಟು ನಿಯಂತ್ರಿಸುತ್ತಾರೆ. 'ಎರೆಮಣ್ಣಿಗೆ ನೀರುಣಿಸದೆ ಇರಬೇಡ, ನೀರು ನಿಲ್ಲಿಸಬೇಡ' ಎಂಬ ಮಲ್ಲಣ್ಣನವರ ಜಲತತ್ವದಂತೆ ಭೂಮಿಯನ್ನು ಇಪ್ಪತ್ನಾಲ್ಕು ಗಂಟೆಗಳ ಕಾಲ ತಂಪಾಗುವಂತೆ ಮಾಡಿ, ಹೆಚ್ಚಾದ ನೀರನ್ನು ಹೊರ ಹಾಕುವ ಇವರ ವೈಜ್ಞಾನಿಕ ತಂತ್ರವು ಕೃಷಿಕರನ್ನು ಬೆರಗುಗೊಳಿಸಿದೆ. ಕಡಿಮೆ ಮಳೆಯಾದ ವರ್ಷದಲ್ಲಿ ಹರಿದು ಬರುವ ಅಲ್ಪಪ್ರಮಾಣದ ನೀರನ್ನು ಇಂಗುವಂತೆ ಮಾಡಿ ಬರಗಾಲದಲ್ಲಿಯೂ ಶೇ 30 ರಿಂದ 40% ರಷ್ಟು ಬೆಳೆ ಪಡೆದಿದ್ದಾರೆ. ಇದು ಇಡೀ ಹುನಗುಂದ ತಾಲ್ಲೂಕಿನ ಕೃಷಿಕರು ಅಳವಡಿಸಿಕೊಂಡ ದೇಶೀ ಜ್ಞಾನವಾಗಿದೆ.

**ಶಂಕರಣ್ಣ ನಾಗರಾಳರ ವಚನಗಳಲ್ಲಿ ಕೃಷಿ ಚಿಂತನೆಗಳು:**

ತಂದೆಯವರಾದ ಸಂಗನಬಸಪ್ಪನವರ ಕಾಯಕ ಸಿದ್ಧಾಂತವನ್ನು ಅವರ ಮಾರ್ಗದರ್ಶನದ ಮೂಲಕ ಪ್ರೇರಣೆ ಪಡೆದ ಶಂಕರಣ್ಣನವರು ಕೃಷಿಯನ್ನು ಆರ್ಥಿಕ ಲಾಭವಾಗಿ ಪರಿಗಣಿಸಲಿಲ್ಲ. ಅದೊಂದು ಧಾರ್ಮಿಕ ಹಾಗೂ ಸಾಮಾಜಿಕ ಕರ್ತವ್ಯವೆಂದು ಭಾವಿಸಿಕೊಂಡು ಎರಡನೇ ತಲೆಮಾರಿನ ಕೃಷಿ ಪರಂಪರೆಯನ್ನು ಮುಂದುವರೆಸಿದರು. ಇವರು ಮಠ–ಮಾನ್ಯಗಳು, ಕೃಷಿ ಇಲಾಖೆಗಳು ಆಯೋಜಿಸುವ 'ಕೃಷಿ ತರಬೇತಿ' ಕಾರ್ಯಕ್ರಮಗಳಲ್ಲಿ ಮುಖ್ಯ ಕೃಷಿ ಚಿಂತಕರಾಗಿ ಅಂದಿನ ಕೃಷಿಕರಿಗೆ ತಮ್ಮ ಅನುಭವಧಾರೆಯನ್ನು ನೀಡುವ ಮೂಲಕ ಪ್ರೇರಕಶಕ್ತಿಯಾಗಿದ್ದರು.

ಶಂಕರಣ್ಣನವರು 'ರೈತರು ಹೊಲಗಳಲ್ಲಿ ಕೇವಲ ಒಡ್ಡುಗಳನ್ನು ಹಾಕುವುದರಿಂದ ಬರಗಾಲವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಪರ್ಯಾಯವಾಗಿ ರೈತರ ಮನೋಶಕ್ತಿ ಬದಲಾಗಬೇಕು' ಎಂಬ ನಿಲುವನ್ನು ಹೊಂದಿದ್ದರು. ಹೀಗಾಗಿ ರೈತರ ಬೌದ್ಧಿಕ ಮಟ್ಟದಲ್ಲಿ ಸುಧಾರಣೆ ಕೈಗೊಳ್ಳಲು ಅವರು ಅನುಸರಿಸಿದ ಮಾರ್ಗವೇ ವಚನ ಸಾಹಿತ್ಯದ ರಚನೆಯಾಗಿದೆ. ಮಣ್ಣು ಸಂರಕ್ಷಣೆ, ನೀರಿನ ನಿರ್ವಹಣೆ, ಸಾವಯವ ಗೊಬ್ಬರ ಮಾಡುವ ವಿಧಾನ, ಕೃಷಿಯಲ್ಲಿ ಗಿಡಮರಗಳ ಮಹತ್ವ, ದನಗಳ ಪ್ರಾಮುಖ್ಯತೆ, ಬೆಳೆಗಳ ಪರಿವರ್ತನೆ, ಆರ್ಥಿಕ ಲಾಭಗಳು, ಒಡ್ಡುಗಳ ಮಹತ್ವ ಇತ್ಯಾದಿ ವಿಚಾರಗಳ ಬಗ್ಗೆ ಅನಕ್ಷರಸ್ಥ ರೈತನಿಗೂ ಸರಳವಾಗಿ ಅರ್ಥವಾಗುವ ಭಾಷೆಯಲ್ಲಿ ಕೃಷಿ ವಚನಗಳನ್ನು ಬರೆದಿದ್ದಾರೆ. "ಈ ಎಲ್ಲ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ ಅದೊಂದು ಆಧುನಿಕ ವಚನಸಾಹಿತ್ಯಕ್ಕೆ ಅನರ್ಘ್ಯ ಕೊಡುಗೆಯಾಗುತ್ತದೆ. ರೈತಸಮಾಜಕ್ಕಂತೂ ಅತ್ಯಂತ ಮಹತ್ವದ ಕೈಪಿಡಿಯಾಗುತ್ತದೆ; ದಾರಿದೀಪವಾಗುತ್ತದೆ" ಎಂದು ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ–ಗದಗದ ವೀರಶೈವ ಅಧ್ಯಯನ ಸಂಸ್ಥೆಯ ಅಡಿಯಲ್ಲಿ 'ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ'ಯ 168ನೇ ಕೃತಿ 'ಶಂಕರಣ್ಣ ನಾಗರಾಳ' ಎನ್ನುವ ಪುಸ್ತಕದಲ್ಲಿ ದಾಖಲಿಸಿದ್ದಾರೆ. 1998 ಜುಲೈ 12ರ ಪ್ರಪಂಚ ಪತ್ರಿಕೆಯಲ್ಲಿ ಡಾ.ಪಾಟೀಲ ಪುಟ್ಟಪ್ಪನವರು "ಇವರು ಓದಿರುವುದು 4ನೇ ತರಗತಿಯಾದರೂ ಕೃಷಿಕರಾಗಿ ಕೃಷಿ ಬಗ್ಗೆ ಒಳ್ಳೆಯ ಕಾವ್ಯವಸ್ತು ನಿರ್ಮಿಸಿದ್ದಾರೆ. ಘನಮಠದಾರ್ಯರ ಬೋಧೆಯೇ ಕೃಷಿಯ ಕೈದೀಪವಾಗಿತ್ತು. ಕೃಷಿಯನ್ನು ಇವರು ಒಂದು ಯೋಗ ಸಾಧನೆ ಎಂಬಂತೆ ತಿಳಿದಿದ್ದಾರೆ" ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಶ್ರೀ ಶಂಕರಣ್ಣ ನಾಗರಾಳ ಅವರು ಕೃಷಿ ಕಾಯಕ ಮಾಡುತ್ತಾ ಸಮಯ ಸಿಕ್ಕಾಗ ಕೃಷಿ ಚಿಂತನೆ–ಮಂಥನಗೈದು ಬರಹರೂಪದಲ್ಲಿ ಸುಮಾರು ಎರಡುನೂರಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಕೃಷಿ ಹಾಗೂ ಪಾರಮಾರ್ಥಿಕ ವಿಷಯಗಳಿಗೆ ಸಂಬಂಧಿಸಿದ ವಚನಗಳನ್ನು ಚಿತ್ತರಗಿ ವಿಜಯ ಮಹಾಂತೇಶ ಹಾಗೂ ಶ್ರೀ ಘನಮಠೇಶ ಎಂಬ ಅಂಕಿತಗಳಲ್ಲಿ ರಚಿಸಿದ್ದಾರೆ. ಅಲ್ಲದೆ ಒಕ್ಕಲುತನಕ್ಕೆ ಸಂಬಂಧಿಸಿದ ಹಂತಿಪದ, ಲಾವಣಿ ಪದಗಳನ್ನು ರಚಿಸಿ, ರೇಡಿಯೋ ಕಾರ್ಯಕ್ರಮಗಳಲ್ಲಿ ಸ್ವತಃ ಗಾಯನವನ್ನು ಮಾಡುತ್ತಾ ಕೃಷಿ ಜಾಗೃತಿಯನ್ನು ಮಾಡಿದ್ದಾರೆ. ಅವುಗಳಲ್ಲಿ ಒಂದು ವಚನ ಹೀಗಿದೆ:

**ಓದಿ ಓದಿ ಹಾದಿಯ ಬಿಟ್ಟರು ಕೆಲವರು**
**ನುಡಿದು ನುಡಿದು ನಡತೆಯ ಬಿಟ್ಟರು ಕೆಲವರು**
**ಬೇಡಿ ಬೇಡಿ ದುಡಿತ ಬಿಟ್ಟವರು ಹಲವರಯ್ಯ.**
**ದುಡಿಯದೆ ಉಂಡ ಅನ್ನ ರುಚಿಸುವುದೆಂತಯ್ಯ**
**ಎಡಬಿಡದೆ ಭೂಮಿಯಲಿ ದುಡಿ ದುಡಿ**

**ಕಡೆತನಕ ಸಂತೃಪ್ತಿಪಡಿ ಪಡಿ ಎಂದ**

**ಚಿತ್ತರಗಿ ವಿಜಯ ಮಹಾಂತೇಶ.**

ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಪಡೆದುಕೊಂಡವರು ಕೃಷಿಯಿಂದ ದೂರವಾಗುತ್ತಿರುವುದು ಖೇದಕರ. ಏಕೆಂದರೆ ಕೃಷಿಯೆಂದರೆ ಅದು ಅನಕ್ಷರಸ್ಥರ ಕಾಯಕವೆಂಬ ಜನಸಾಮಾನ್ಯರ ತಪ್ಪು ಕಲ್ಪನೆಯು ಅಳಿಸಲಾಗುತ್ತಿಲ್ಲ. ತಮ್ಮ ಹೊಲಗಳನ್ನು ಬೀಳುಬಿಟ್ಟು ಪಟ್ಟಣಗಳಲ್ಲಿ 10-15 ಸಾವಿರಗಳಿಗೆ ದುಡಿಯುವ ಯುವಕರು, ದುಶ್ಚಟಗಳ ದಾಸರಾಗುತ್ತಿದ್ದಾರೆ. ಎಡಬಿಡದೆ ಭೂಮಿಯಲ್ಲಿ ದುಡಿಯುವ ಅವರ ತಂದೆ-ತಾಯಿಗಳ ಜೊತೆ ಕೈಜೋಡಿಸಿದರೆ ಹಳೆಬೇರು-ಹೊಸ ಚಿಗುರು ಎಂಬ ಗಾದೆಮಾತಿನಂತೆ ಈ ಎರಡರ ಸಮ್ಮಿಲನದಿಂದ ಕೃಷಿಯಲ್ಲಿ ಪ್ರಗತಿಪರ ಚಿಂತನೆಗಳನ್ನು ಅಳವಡಿಸಿಕೊಳ್ಳಬಹುದು. ಓದಿದವರೆಲ್ಲರಿಗೂ ಉದ್ಯೋಗ ದೊರೆಯಲಾರದು. ಎಐ ತಂತ್ರಜ್ಞಾನ ಯುಗದಿಂದ ಉದ್ಯೋಗ ಕಡಿತವಾಗುತ್ತಿರುವ ದಿನಮಾನಗಳಲ್ಲಿ ಹಳ್ಳಿಯ ಶಿಕ್ಷಣವಂತ ಯುವಕರು ಕೃಷಿಯತ್ತ ಮನಸ್ಸು ಮಾಡಬೇಕಿದೆ. ಇದಕ್ಕೆ ನಿದರ್ಶನವೆಂಬಂತೆ ಬೆಳಗಾವಿ ಜಿಲ್ಲೆಯ ಗುಡಿಕಟ್ಟಿ ಗ್ರಾಮದ ಈರಯ್ಯ ಕಿಲ್ಲೇದಾರ ಬಿಎ ಪದವಿ ಹಾಗೂ ಲಿಂಗಸಗೂರು ತಾಲ್ಲೂಕಿನ ಸರ್ಜಾಪುರ ಗ್ರಾಮದ ಇಂಜಿನಿಯರಿಂಗ್ ಪದವೀಧರರಾದ ಶರಣಗೌಡ ಪಾಟೀಲ ಅವರು ಸಾವಯವ ಕೃಷಿಯಲ್ಲಿ ಯಶಸ್ವಿಯಾಗಿದ್ದಾರೆ. ಇಂಥ ನೂರಾರು ಜನ ಉನ್ನತ ಶಿಕ್ಷಣ ಪಡೆದುಕೊಂಡು ಶ್ರೇಷ್ಠ ಕೃಷಿಕರಾದ ನಿದರ್ಶನಗಳುಂಟು.

**ಪರಂಪರೆಯ ಶಿಖರ ಡಾ. ಮಲ್ಲಣ್ಣ ನಾಗರಾಳ:**

ಮಲ್ಲಣ್ಣ ನಾಗರಾಳರು ಕೃಷಿ ವಿಜ್ಞಾನಿಯಾಗಿ, ಅಧ್ಯಾತ್ಮಿಕ ಪಂಡಿತರಾಗಿ ತಮ್ಮ ಪೂರ್ವಜರು ಅಳವಡಿಸಿಕೊಂಡಿದ್ದ ಜ್ಞಾನವನ್ನು ಆಧುನಿಕ ವಿಜ್ಞಾನದೊಂದಿಗೆ ಮುಂದುವರೆಸಿದರು. ಅಜ್ಜ-ತಂದೆಯವರ ಕೃಷಿ ಪರಂಪರೆಯನ್ನು ಜತನದಿಂದ ಕಾಪಾಡಿಕೊಂಡು ಮುಂದುವರೆಸಿ ಮನೆತನದ ಕೀರ್ತಿಯನ್ನು ಇಮ್ಮಡಿಗೊಳಿಸಲು ಪ್ರಮುಖಪಾತ್ರ ನಿರ್ವಹಿಸಿದ್ದಾರೆ. ಇವರು ನೆಲ-ಜಲ ಸಂರಕ್ಷಕರಾಗಿ ನಾಡಿನಾದ್ಯಂತ ಪ್ರಸಿದ್ಧರಾಗಿದ್ದಾರೆ. ಈ ಕುಟುಂಬದ ಮೂರು ತಲೆಮಾರುಗಳ ಕೃಷಿ ಸಾಧನೆಗಾಗಿ 2004 ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ. ಬಾಗಲಕೋಟೆ ಜಿಲ್ಲಾಧಿಕಾರಿಗಳಾಗಿದ್ದ ಕೆ.ಎಸ್.ಪ್ರಭಾಕರ ಅವರೊಂದಿಗೆ ಕೈಜೋಡಿಸಿ ಜಲ ಸಾಕ್ಷರತೆ ಎಂಬ ಪರಿಕಲ್ಪನೆಯನ್ನು ಅದೊಂದು ಆಂದೋಲನವಾಗಿ ರೂಪಿಸಿದ ಕೀರ್ತಿಯು ಮಲ್ಲಣ್ಣನವರಿಗೂ ಸಲ್ಲುತ್ತದೆ. ಸ್ವತಃ ಕೆ.ಎಸ್.ಪ್ರಭಾಕರ ಅವರೇ ಹೇಳುವಂತೆ "ನಾವು ಜಿಲ್ಲೆಯಾದ್ಯಂತ ಎಲ್ಲಾ ಹಳ್ಳಿಗಳಿಗೂ ಭೇಟಿ ನೀಡಿ ಮಣ್ಣು-ನೀರಿನ ಸಂರಕ್ಷಣೆ-ನಿರ್ವಹಣೆ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಲು ಮಲ್ಲಣ್ಣ ನಾಗರಾಳರವರ ಪಾತ್ರ ಪ್ರಮುಖವಾಗಿದೆ" ಎಂದು ತಿಳಿಸುತ್ತಾರೆ. ನೀರು ಕೇವಲ ಸಂಪನ್ಮೂಲವಲ್ಲ; ಅದೊಂದು ಜೀವಶಕ್ತಿಯ ರೂಪದಂತೆ ಕಾಣುವ ದೃಷ್ಟಿಕೋನವನ್ನು, ಗ್ರಾಮೀಣ ಜನರು ಪೂರ್ವದಿಂದಲೂ ಅಳವಡಿಸಿಕೊಂಡ ಕೆರೆ, ಹಳ್ಳ, ಮಳೆ ನೀರನ್ನು ಪುನರುಜ್ಜೀವನಗೊಳಿಸುವುದಲ್ಲದೆ ಸಮರ್ಪಕ ಬಳಕೆ ಬಗ್ಗೆ ವೈಜ್ಞಾನಿಕ ತತ್ವಗಳನ್ನು ಜನರ ಮನಸ್ಸಿನಲ್ಲಿ ಬಿತ್ತುತ್ತಿದ್ದರು.

ಇವರು ಸಮಕಾಲೀನ ಕೃಷಿ ಬಿಕ್ಕಟ್ಟುಗಳ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೊಂದಿದ್ದರು. ದೇಶವು ತೀವ್ರಗತಿಯಲ್ಲಿ ಜನಸಂಖ್ಯೆ ಮಿತಿಮೀರಿ ಏರಿಕೆಯಾಗುವುದನ್ನು; ಇದಕ್ಕೆ ತಕ್ಕಂತೆ ಕೃಷಿಭೂಮಿ, ಅರಣ್ಯಪ್ರದೇಶ ಕುಗ್ಗುತ್ತಿರುವುದನ್ನು ತಮ್ಮ ಮಾತಿನಲ್ಲಿ ಕಳವಳ ವ್ಯಕ್ತಪಡಿಸುತ್ತಿದ್ದರು. ಇಂದು ಫಲವತ್ತಾದ ಕೃಷಿಭೂಮಿಯೇ ನಿವೇಶನ, ಕಾರ್ಖಾನೆಗಳ ಸ್ಥಾಪನೆ, ಕಟ್ಟಡಗಳ

ನಿರ್ಮಾಣ, ಸೋಲಾರ್ ವಿದ್ಯುತ್ ತಯಾರಿಸಲು ಮುಂತಾದ ಆರ್ಥಿಕ ಲಾಭಕ್ಕೆ ಬಲಿಯಾಗುತ್ತಿದೆ. ಹಣದ ಹಿಂದೆ ಬಿದ್ದ ರೈತರು ಅನ್ನ ಕೊಡುವ, ಚಿನ್ನದ ಬೆಳೆ ನೀಡುವ ಭೂಮಿಯನ್ನೇ ಕಳೆದುಕೊಂಡು ನಿರಾಶ್ರಿತರಾಗುತ್ತಿದ್ದಾರೆ. ಪ್ರಸ್ತುತ ಕೃಷಿಯಲ್ಲಿ ನಷ್ಟವನ್ನು ಅನುಭವಿಸಿ ಸಾಲಬಾಧೆಗೊಳಗಾಗಿ ರೈತರು ಆತ್ಮಹತ್ಯೆ ಎಂಬ ಕ್ರೂರ ಪ್ರವೃತ್ತಿಯನ್ನು ಹೆಚ್ಚಿನ ರೈತರು ಅಳವಡಿಸಿಕೊಳ್ಳುತ್ತಿರುವುದನ್ನು ಖಂಡಿಸುತ್ತಾರೆ. ರೈತರು ಮನೋಬಲ, ಆತ್ಮಬಲಗಳನ್ನು ವೃದ್ಧಿಸಿಕೊಂಡು ಸಾಧನೆಗೈಯಬೇಕು. ಆತ್ಮಹತ್ಯೆಯೊಂದೇ ಪರಿಹಾರವಲ್ಲ, ಬರಗಾಲಕ್ಕೆ ಸೊಡ್ಡು ಹೊಡೆಯುವ ತಂತ್ರಗಾರಿಕೆಯನ್ನು ಸಾಮಾನ್ಯ ರೈತರಿಗೆ ಅರ್ಥವಾಗುವಂತೆ ಕೃಷಿ ಪರಂಪರೆಯನ್ನು ತಿಳಿಸುತ್ತಿದ್ದರು. ಇಂದು ಹುನಗುಂದ ತಾಲ್ಲೂಕಿನ ರೈತರು ಬರಗಾಲಕ್ಕೆ ಹೆದರಿ ಗುಳೆ ಹೋಗದೇ ಕೃಷಿಯಲ್ಲಿಯೇ ಮುಂದುವರೆಯುವ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಾಗರಾಳ ಕುಟುಂಬದ ಕೃಷಿಜ್ಞಾನ ಪರಂಪರೆಯೇ ಪ್ರೇರಣೆಯಾಗಿದೆ.

ಮಲ್ಲಣ್ಣ ನಾಗರಾಳ ತಮ್ಮ ಕೃಷಿ ಚಿಂತನೆಗಳನ್ನು 'ಕೃಷಿನಿಧಿ ಘನಮಠದಪ್ಪ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಅಲ್ಲದೇ ಧಾರವಾಡದ 'ಕೃಷಿ ಕಾಮಧೇನು' ಪತ್ರಿಕೆಯ ಸಂಪಾದಕರಾದ ವಿರೂಪಾಕ್ಷಪ್ಪ ಬಡಿಗೇರ ಅವರು ಮಲ್ಲಣ್ಣನವರ ಸಂದರ್ಶನ ಮಾಡಿ ಅವರು ಹೇಳಿದ ಎಲ್ಲ ಕೃಷಿ ಚಿಂತನೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿ ರೈತರಿಗೆ ತಲುಪಿಸಿದ್ದಾರೆ. ಸಂದರ್ಶನಗಳನ್ನು 'ಘನಮಠ ಶಿವಯೋಗಿ ವಿರಚಿತ ಕೃಷಿಜ್ಞಾನ ಪ್ರದೀಪಿಕೆ – ಒಂದು ಸಮೀಕ್ಷೆ' ಹಾಗೂ 'ಕೃಷಿಋಷಿ ಡಾ.ಮಲ್ಲಣ್ಣ ನಾಗರಾಳ ಜೀವನ ಸಾಧನೆ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ಕಾಸರಗೋಡಿನ ಪತ್ರಕರ್ತರಾದ ಶ್ರೀಪಡ್ರೆಯವರು 'ಶರಣು ಬನ್ನಿ ಜಲಕಾಯಕಕೆ' ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ 'ಮಣ್ಣು ಮತ್ತು ನೀರು' ಕೃತಿಯಲ್ಲಿ ಸುದೀರ್ಘವಾದ ಲೇಖನ ಪ್ರಕಟಿಸಿದ್ದಾರೆ. ಅಲ್ಲದೆ 'ಬರವನ್ನೇ ಮಣಿಸಿದ ಮಲ್ಲಣ್ಣ' ಎಂಬ ಕೃತಿಯನ್ನು ಧಾರವಾಡದ ಕೃಷಿ ಮಾಧ್ಯಮ ಕೇಂದ್ರ ಪ್ರಕಟಿಸಿದೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದ 'ಕೃಷಿ ಪ್ರದೀಪಿಕೆ' ಪತ್ರಿಕೆಯಲ್ಲಿಯೂ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದ 'ಒಣ ಬೇಸಾಯ ಪದ್ಧತಿಗಳು' ಎಂಬ ಪುಸ್ತಕದಲ್ಲಿಯೂ ತಮ್ಮ ಕೃಷಿ ಚಿಂತನೆಗಳನ್ನು ಮಲ್ಲಣ್ಣನವರು ಹಂಚಿಕೊಂಡಿದ್ದಾರೆ. ಅಲ್ಲದೆ ನಾಡಿನಾದ್ಯಂತ ನೂರಾರು ವೇದಿಕೆಗಳಲ್ಲಿ ಉಪನ್ಯಾಸ ನೀಡುವ ಮೂಲಕ ತಮ್ಮ ಕೃಷಿ ಚಿಂತನೆಗಳನ್ನು ಬಿತ್ತರಿಸಿದ್ದಾರೆ. ಇವರ ಮಾತುಗಳಲ್ಲಿ ರೈತರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದಲ್ಲದೆ ಮನೋಬಲ–ಆತ್ಮಸ್ಥೈರ್ಯ ಕುಸಿಯದಂತೆ ಮಾತನಾಡುತ್ತಿದ್ದರು. ಕೃಷಿಯನ್ನು ಬಸವಾದಿ ಪ್ರಮಥರ ಮತ್ತು ತಂದೆ ಶಂಕರಣ್ಣನವರ ಸಾಹಿತ್ಯವನ್ನು ಉಲ್ಲೇಖಿಸುವ ಮುಖಾಂತರ ಕೃಷಿಯಲ್ಲಿ ಪ್ರೀತಿ, ಕಾಳಜಿ, ಬದ್ಧತೆಯನ್ನುಂಟು ಮಾಡುತ್ತಿದ್ದರು. ಇವರ ಕೃಷಿ ವಿಚಾರಗಳು ಕೇವಲ ಒಂದು ಮನೆತನಕ್ಕೆ ಮಾತ್ರ ಸೀಮಿತವಾದವುಗಳಲ್ಲ; ಸರ್ವ ಕೃಷಿಕರಿಗೆ ಮಾರ್ಗದರ್ಶಿಯಾಗಿವೆ.

ನಾಗರಾಳರು ಮೂರು ತಲೆಮಾರುಗಳಿಂದ ಅನುಸರಿಸಿಕೊಂಡು ಬರುತ್ತಿರುವ ಈ ಕೃಷಿ ಪದ್ಧತಿಯು ಕೇವಲ ಒಂದು ಕುಟುಂಬಕ್ಕೆ ಮಾತ್ರ ಸೀಮಿತವಲ್ಲ. ಅದು ಭಾರತೀಯ ದೇಶೀ ಕೃಷಿ ಪರಂಪರೆಯ ದ್ಯೋತಕವಾಗಿದೆ. ಸ್ಥಳೀಯ ತಾಂತ್ರಿಕತೆ, ಪರಿಸರ ಕಾಳಜಿ, ಸಾಹಿತ್ಯಕ ವಾತಾವರಣಗಳ ಸಮ್ಮಿಲನದಂತಿದೆ. ಸಂಗನಬಸಪ್ಪನವರು ಕೃಷಿಜ್ಞಾನ ಪ್ರದೀಪಿಕೆಯಿಂದ ಪ್ರೇರಣೆಗೊಂಡು ಅನುಸರಿಸಿದ ಭೌತಿಕ ಶ್ರಮ, ಶಂಕರಣ್ಣನವರು ತಮ್ಮ ಬೌದ್ಧಿಕ ಅನುಭವಗಳನ್ನೆಲ್ಲಾ ವಚನ–ಲಾವಣಿ ಇತ್ಯಾದಿ ಸಾಹಿತ್ಯಿಕ ಪ್ರಕಾರಗಳ ಮೂಲಕ ಅಭಿವ್ಯಕ್ತಪಡಿಸಿ ಸಾಮುದಾಯಿಕ ಕ್ರಾಂತಿಯನ್ನಾಗಿ ಮಾಡಿದ್ದಾರೆ. ಇವರ ಕಾಯಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಮಲ್ಲಣ್ಣನವರು ಆಧುನಿಕ ವಿಜ್ಞಾನದೊಂದಿಗೆ

ತಮ್ಮ ದೇಶೀ ಕೃಷಿಯ ತಂತ್ರಗಳನ್ನು ಅಳವಡಿಸಿಕೊಳ್ಳುವ ಮೂಲಕ ಒಂದು ಸಾಂಸ್ಥಿಕ ಮಾನ್ಯತೆಯನ್ನು ತಂದುಕೊಟ್ಟರು. ಅಂದರೆ ಕೃಷಿ ಕೇವಲ ವೃತ್ತಿಯಲ್ಲ; ಅದೊಂದು ಪರಿಶುದ್ಧ ಕಾಯಕವಾಗಿ ಅನುಸರಿಸಿದ ಪರಂಪರೆಯ ಸಂಕೇತವಾಗಿದೆ. ಕೊನೆಯದಾಗಿ ಹೇಳುವುದಾದರೆ, ಘನಮಠ ಶಿವಯೋಗಿಗಳ ಕೃಷಿಜ್ಞಾನ ಪ್ರದೀಪಿಕೆಯು ಒಂದು ಕುಟುಂಬದ ಆರ್ಥಿಕ, ಸಾಮಾಜಿಕ ಚಿತ್ರಣವನ್ನು ಹೇಗೆ ಬದಲಾಯಿಸಿತು ಎಂಬುದಕ್ಕೆ ಇದೊಂದು ನಿದರ್ಶನ. ಹೀಗಾಗಿಯೇ ಪ್ರಸ್ತುತ ಕೃಷಿಯಲ್ಲಿ ಶಿಕ್ಷಣವಂತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು, ಸಾವಯವ ಕೃಷಿಯನ್ನು ಅನುಷ್ಠಾನಕ್ಕೆ ತಂದು ಮಣ್ಣು-ನೀರು ಕಲುಷಿತವಾಗುತ್ತಿರುವುದನ್ನು ನಿಯಂತ್ರಿಸುವುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಮಲ್ಲಣ್ಣ ಶಂಕರಣ್ಣ ನಾಗರಾಳ, (2010), ಒಣ ಬೇಸಾಯ ಪದ್ಧತಿಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಶ್ರೀಪಡ್ರೆ, (2004), ಶರಣು ಬನ್ನಿ ಜಲಕಾಯಕಕೆ, ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್.
3. ಕೊನೆಸಾಗರ ಎಸ್. ಕೆ., (2006), ಅಂಗೈ ಅಗಲ ಭೂಮಿಯಲ್ಲಿ ಭರ್ಜರಿ ಇಳುವರಿ ಪಡೆದ ಮಲ್ಲಣ್ಣ (ಪ್ರಜಾವಾಣಿ ಪತ್ರಿಕೆ ಲೇಖನ), ಹುಬ್ಬಳ್ಳಿ: ಪ್ರಜಾವಾಣಿ ಪತ್ರಿಕಾ ಪ್ರಕಾಶನ.
4. ಬಸವರಾಜ ತೆಗ್ಗಿನಮಠ, (2001), ಶಂಕರಣ್ಣ ನಾಗರಾಳ (ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ-168), ಗದಗ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನಮಠ.
5. ಶ್ರೀಪಡ್ರೆ, (2008), ಕರ್ನಾಟಕದ ಬರನಿರೋಧಕ ಜಾಣ್ಮೆಗಳು (ಮಣ್ಣು ಮತ್ತು ನೀರು), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
6. ಮಲ್ಲಣ್ಣ ನಾಗರಾಳ ಮತ್ತು ಡಾ. ವಿರೂಪಾಕ್ಷ ಬಡಿಗೇರ, (2018), ಘನಮಠ ಶಿವಯೋಗಿ ವಿರಚಿತ ಕೃಷಿಜ್ಞಾನ ಪ್ರದೀಪಿಕೆ – ಒಂದು ಸಮೀಕ್ಷೆ, ಧಾರವಾಡ: ಕೃಷಿ ಕಾಮಧೇನು ಪ್ರಕಾಶನ.
7. ಮಲ್ಲಣ್ಣ ನಾಗರಾಳ, (2019), ಕೃಷಿನಿಧಿ ಘನಮಠದಪ್ಪ, ಸಂತೆಕೆಲ್ಲೂರ: ಘನಮಠೇಶ್ವರ ಮಠ.
8. ಮಾಗಿ ಬಿ. ಎಂ., ನಾಗರಾಳ ಸಂಗನಬಸಪ್ಪನವರು (ವೀರಶೈವ ಪುಣ್ಯಪುರುಷರ ಮಾಲೆ), ಗದಗ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನಮಠ.